# ಕಾಫಿಯಲ್ಲಿ ಅಕಾಲಿಕ ಕಾಫಿ ಉದುರುವಿಕೆ, ಕೊಳೆ ರೋಗ –ಕೆ.ವಿ.ಕೆ ಸಲಹೆ

## ಅಕಾಲಿಕ ಕಾಫಿ ಉದುರುವಿಕೆಗೆ ಕಾರಣಗಳು

- ಜನವರಿ ಹಾಗೂ ಫೆಬ್ರವರಿ ತಿಂಗಳಿನಲ್ಲಿ ಅಕಾಲಿಕ ಮಳೆಯಾಗುವುದರಿಂದ ಒಂದಕ್ಕಿಂತ ಹೆಚ್ಚು ಬಾರಿ ಕಾಫಿಯಲ್ಲಿ ಹೂವಾಗಿ ವಿವಿಧ ಗಾತ್ರದ ಕಾಯಿಗಳ ಬೆಳವಣಿಗೆಯಾಗುತ್ತದೆ.
- ಜೂನ್ ತಿಂಗಳಿನಿಂದ ಆಗಸ್ಟ್ ತಿಂಗಳಿನವರೆಗೆ ಹೆಚ್ಚು ಮಳೆಯಾಗುವುದರಿಂದ ಕೊಳೆರೋಗದಿಂದ ಕಾಫಿ ಉದುರುವುದು.
- ಕಾಫಿ ಗಿಡದ ರೆಂಬೆಯಲ್ಲಿ ಹೆಚ್ಚಿನ ಕಾಯಿ ಕಚ್ಚುವುದು
- ಜೂನ್ ತಿಂಗಳಿನಿಂದ ಆಗಸ್ಟ್ ತಿಂಗಳಿನವರೆಗೆ ಹೆಚ್ಚು ಮಳೆಯಾಗುವುದರಿಂದ ಬೇರುಗಳು ಉಸಿರಾಡಲು ಸಮಸ್ಯೆಯಾಗಿ (**Wet feet**) ಕಾಫಿ ಉದುರುವುದು

## ಹತೋಟಿ ವಿಧಾನಗಳು

- ಪ್ರತಿ ಎಕರೆ ಪ್ರದೇಶಕ್ಕೆ 50 ಕೆ.ಜಿ ಯೂರಿಯಾವನ್ನು ಎರಚಬೇಕು.
- ತೋಟಗಲ್ಲಿ ನೀರು ನಿಲ್ಲುತ್ತೀದ್ದರೆ, ನೀರನ್ನು ಬಸಿದು ಹೋಗುವಂತೆ ಮಾಡಬೇಕು
- ಕೊಳೆ ರೋಗ ಕಡಿಮೆ ಇರುವ ತೋಟಗಳಲ್ಲಿ ಶೇ. 1.0 ರ ಬೋರ್ಡೋ ದ್ರಾವಣ ಮತ್ತು ಪ್ಲನೋಫಿಕ್ಸ್ 50 ಮಿ.ಲಿ ಪ್ರತಿ ಲೀಟರ್ ನೀರಿಗೆ ಬೆರಸಿ ಸಿಂಪಡಿಸಬೇಕು.
- ಕೊಳೆ ರೋಗ ಕಂಡು ಬಂದ ತೋಟಗಳಲ್ಲಿ ಟೆಬ್ಯುಕೊನೋಜೋಲ್ 200 ಮಿ.ಲಿ ಮತ್ತು 1 ಕೆ.ಜಿ. ಪೊಟ್ಯಾಷಿಯಂ ನೈಟ್ರೈಟ್ (13:0:45) ಮತ್ತು ಪ್ಲನೋಫಿಕ್ಸ್ 50 ಮಿ.ಲಿ ಅಂಟು ದ್ರಾವಣವನ್ನು 200 ಲೀಟರ್ ನೀರಿಗೆ ಬೆರಸಿ ಸಿಂಪಡಿಸಬೇಕು.


ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ

ಮುಖ್ಯಸ್ಥರು

ಐ.ಸಿ.ಎ.ಆರ್–ಕೃಷಿ ವಿಜ್ಞಾನ ಕೇಂದ್ರ

ಗೋಣಿಕೊಪ್ಪಲು, ಕೊಡಗು ಜಿಲ್ಲೆ, ದೂರವಾಣಿ: 08274–295274